**OS 151/2021**
**PW-2**

ದಿನಾಂಕ:23.01.20206 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿ ವಾದಿ ಪರ ಶ್ರೀ. ಪಿ ಕೆ ವಿ ವಕೀಲರಿಂದಃ

ವಾದಿ ಮತ್ತು ಪ್ರತಿವಾದಿ ನಮ್ಮ ಊರಿನವರು. ವಾದಿ ಮತ್ತು 1ನೇ ಪ್ರತಿವಾದಿ ಯಾವುದೇ ರೀತಿ ಸಂಬಂಧ ಇಲ್ಲ. ಮಾತುಕತೆ ಆಗುವಾಗ ನಾನು ವಾದಿ ಮತ್ತು 1ನೇ ಪ್ರತಿವಾದಿ ಇದ್ದೇವು. ಗುಂಟೆಗೆ ಎಷ್ಟು ಬೆಲೆಗೆ ವ್ಯಾಪಾರ ಮಾಡಿದ್ದೀರ ಎಂದರೇ ರೂ.50,000/-. ಕ್ರಯ ಕರಾರು ಆಗುವ ಸಮಯದಲ್ಲಿ ಕೋವೀಡ್ ಇತ್ತು ಎಂದರೇ ಹೌದು. ಕ್ರಯ ಕರಾರು ಆದ ನಂತರ ಆ ಆಸ್ತಿಯಲ್ಲಿ ಬೋರ್ ವೆಲ್ ಕೋರಿಸಿದ್ದರು ಎಂದರೇ ಹೌದು. ಕ್ರಯ ಕರಾರು ಅದ ನಂತರ ಮನೆ ಮತ್ತು ಅಂಗಡಿಯನ್ನು ಕಟ್ಟಿಕೊಂಡಿದ್ದಾರೆ ಎಂದರೇ ಹೌದು. ಕ್ರಯ ಕರಾರು ಅದ ಆಸ್ತಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಆಸ್ತಿ ಎಂದರೇ ಹೌದು. ಪ್ರಸ್ತುತ ಆ ಜಾಗಕ್ಕೂ ಗುಂಟೆಗೆ ಮೂರು ಲಕ್ಷ ಇರುತ್ತದೆ ಎಂದರೇ ಸರಿಯಲ್ಲ. ನನ್ನ ಪ್ರಕಾರ ಆ ಆಸ್ತಿಗೆ ಗುಂಟೆಗೆ ಮೂರು ಲಕ್ಷ ಇತ್ತು ಎಂದರೇ ಸರಿಯಲ್ಲ.

2. ಕ್ರಯ ಕರಾರು ಪತ್ರವನ್ನು ಅದೇ ದಿನ ತಯಾರು ಮಾಡಿರುತ್ತಾರೆ. ಕ್ರಯ ಕರಾರು ಪತ್ರವನ್ನು ಜಾಗದ ಮಾಲೀಕರು ತಯಾರು ಮಾಡಿಸಿರುತ್ತಾರೆ. ನೋಂದಾಣಿ ಮಾಡಿಸಲು 9 ರಿಂದ 10 ಗಂಟೆ ಉಪನೋಂದಾಣಿ ಅಧಿಕಾರಿಗಳ ಕಚೇರಿಗೆ ಹೋಗಿ 1 ರಿಂದ 2 ಗಂಟೆ ಸಮಯದಲ್ಲಿ ನೋಂದಾಣಿಯಾಗಿರುತ್ತದೆ. 10 ಲಕ್ಷ ಹಣವನ್ನು ಚೆಕ್ ಮೂಲಕ ನೀಡಿರುತ್ತಾರೆ. ಅದರ ಚೆಕ್ ನಂಬರ್ ಗೊತ್ತಿಲ್ಲ. ಆದರೆ ದಿನಾಂಕ ಅದೇ ದಿನದು ಇರಬಹುದು ನಾನು ನೋಡಿರುವುದಿಲ್ಲ. ವಾದಿ ಸಂಬಂಧಿ ಅಲ್ಲ. ವಾದಿ ಇದೇ ರೀತಿ ಎಷ್ಟು ಕ್ರಯ ಕರಾರು ಪತ್ರಗಳನ್ನು ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

3. ನವೀನ ಕುಮಾರ್ ಬಿನ್ ಲೇಟ್ ಶಿವಣ್ಣ ತೆಂಕನಹಳ್ಳಿ ಗ್ರಾಮ ಅವರ ಪರಿಚಯ ಇರುತ್ತದೆ. ಅವರು ನಮ್ಮ ಊರಿನವರು. ಅವರೊಂದಿಗೂ ಸಹ ವಾದಿ ಕ್ರಯ ಕರಾರು ಪತ್ರವನುನ ಮಾಡಿಕೊಂಡಿದ್ದಾರೆ

ನನಗೆ ಗೊತ್ತಿಲ್ಲ. 2022 ರಲ್ಲಿ ಗುಡ್ಡೆ ಹೊಸೂರು ಗ್ರಾಮದಲ್ಲಿ ತೆಂಗನ ತೋಟ ಗುಂಟೆ ಎಷ್ಟು ಬೆಲೆ ಇತ್ತು ಎಂದು ನನಗೆ ಗೊತ್ತಿಲ್ಲ. ವಾದಿಯು ನವೀನ್ ಕುಮಾರ್ ರವರ 2.93 ಎಕರೆಯ ತೆಂಗಿನ ತೋಟವನ್ನು ಕ್ರಯ ಕರಾರು ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಆ ದಾವೆ ಈಗಾಲೂ ಸಹ ವಿಚಾರಣೆಗೆ ಬಾಕಿ ಇದೆ ಎಂದರೇ ನನಗೆ ಗೊತ್ತಿಲ್ಲ. ಮೂಲ ದಾವೆ ಸಂಖ್ಯೆ 31/2022 ಇದೇ ನ್ಯಾಯಾಲಯದಲ್ಲಿ ಇದೇ ದಿನ ಇತ್ತು ಎಂದರೇ ಗೊತ್ತಿಲ್ಲ. ವಾದಿ ಬಡ್ಡಿ ವ್ಯವಹಾರ ಮಾಡುತ್ತಾರೆಂದರೆ ಗೊತ್ತಿಲ್ಲ.

4. ಕರಾರನ್ನು ಸಾಲದ ಭದ್ರತೆಗಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರ ಆದ ನಂತರ ಕ್ರಯ ಪತ್ರ ಮಾಡಿಕೊಂಡಿ ಎಂದು ನಾನು ವಾದಿ ಜೊತೆಯಲ್ಲಿ ಪ್ರತಿವಾದಿ ಮನೆಗೆ ಹೋಗಿ ಕೇಳಿದ್ದೀರ ಎಂದರೆ ಇಲ್ಲ. ಕ್ರಯ ಕರಾರು ಪತ್ರ ಸಾಲದ ಭದ್ರತೆಗಾಗಿ ಆದ ಕಾರಣ ಕ್ರಯ ಕರಾರಿಗೆ ನಾನು ಹೋಗಿದ್ದೆ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರಗೆ ಸಂಬಂಧಿಸಿದಂತೆ ಊರಿನಲ್ಲಿ ರಾಜಿ ಮಾತು ಕತೆ ಆಗಿತ್ತ ಎಂದರೆ ನನಗೆ ಗೊತ್ತಿಲ್ಲ ಆದರೆ ನಾನು ದೂರವಾಣಿ ಕರೆ ಮುಖೇನ ಇತ್ಯರ್ಥ ಮಾಡಿಕೊಳ್ಳಿ ಎಂದು ಹೇಳಿದ್ದೆ. ನಾನು ದೂರವಾಣಿ ಕರೆ ಮುಖೇನ ಎರಡು ಬಾರಿ ಹೇಳಿದ್ದೇನೆ. ಪ್ರತಿವಾದಿಗಳಿಗೆ ಆಸ್ತಿ ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ತಯಾರು ಮಾಡಿದ ಪತ್ರಕ್ಕೆ ಸುಳ್ಳು ಸಹಿ ಮಾಡಿ ಸುಳ್ಳ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು)

(ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )